ಗೋಕಾಕ್ ಕ್ಷೇತ್ರದಲ್ಲಿ ನಾಡಕಛೇರಿ ಸ್ಥಾಪನೆ.

130(513) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋಕಾಕ್ ಮತಕ್ಷೇತ್ರದಲ್ಲಿ ಯಾವುದೇ ನಾಡಕಛೇರಿ ಇಲ್ಲದಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಗೋಕಾಕ್ ತಾಲ್ಲೂಕಿನ ಕಣಗಾಂವ ಮತ್ತು ಅಂಕಲಗಿ ಗ್ರಾಮಗಳಲ್ಲಿ ನಾಡ ಕಛೇರಿಗಳನ್ನು ಪ್ರಾರಂಭಿಸಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಹೌದು

ಆ) ಪ್ರಸ್ತುತ ಇರುವ ಆಧಿಕಾರಿ ನೌಕರರ ಸಂಖ್ಯೆಯನ್ನು ಶೇ. 5ರಷ್ಟು ಕಡಿತಗೊಳಿಸುವ ಬಗ್ಗೆ ವಿವರವಾಗಿ ಪರಿಶೀಲಿಸಲು ಸಚಿವಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಉಪ ಸಮಿತಿಯು ಇತ್ತೀಚಿನ ಸಭೆಯಲ್ಲಿ ಕಂದಾಯ ಇಲಾಖೆಗೆ ಸಲಹೆ ನೀಡಿ ಶೇ. 5ರಷ್ಟು ಹುದ್ದೆಗಳನ್ನು ಕಡಿತಗೊಳಿಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಕೆಲವೊಂದು ನಾಡಕಛೇರಿಗಳಲ್ಲಿ ಇಂತಹ ನಾಡ ಕಛೇರಿಗಳಿಂದ ಸಾರ್ವಜನಿಕರಿಗೆ ಅದರಲ್ಲೂ, ಗ್ರಾಮಾಂತರ ಜನರಿಗೆ ಯಾವುದೇ ಅನುಕೂಲವಾಗುತ್ತಿಲ್ಲದ ಕಾರಣ ಅಂತಹ ನಾಡಕಛೇರಿಗಳನ್ನು ಗುರ್ತಿಸಿ ರದ್ದುಮಾಡುವ ಬಗ್ಗೆ ಪರಿಶೀಲಿಸಲು ಸೂಚಿಸಿದೆ. ಅದಾಗ್ಯೂ ಮೇಲಿನ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಕಂದಾಯ ಇಲಾಖೆಯು ಮಾನ್ಯ ಸದಸ್ಯರು ಸೂಚಿಸಿರುವಂತೆ ನೂತನ ನಾಡ ಕಛೇರಿಗಳನ್ನು ತೆರೆಯಲು ಪರಿಶೀಲಿಸಲಾಗುವುದು.

ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣ.

131(52) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿಗೆ 1996-97, 1997-98 ಹಾಗೂ 1998-99ನೇ ಸಾಲಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಸಹಾಯಧನ ಹಾಗೂ ಸಾಲದ ಮೊತ್ತವೆಷ್ಟು; ಹಾಗೂ ಖರ್ಚು ಮಾಡಲಾದ ಹಣ ಎಷ್ಟು? (ವರ್ಷವಾರು ವಿವರ ಒದಗಿಸುವುದು)

ಆ) ಇದನ್ನು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆ; (ಜಿಲ್ಲಾವಾರು ಹಾಗೂ ವರ್ಷವಾರು ವಿವರ ನೀಡುವುದು)?